## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 496
2. ಸದಸ್ಯರ ಹೆಸರು : ಶ್ರೀ ಬಿ.ಕೆ ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 16-12-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | BBMP ವ್ಯಾಪ್ತಿಯ ಎಲ್ಲಾ ಬಡಾವಣೆಯ ರಸ್ತೆಯು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಕೆಲವೊಂದು ಬಡಾವಣೆಗಳ ರಸ್ತೆಗಳಲ್ಲಿ ಸರ್ಕಾರದ ಅಂಗಸಂಸ್ಥೆಗಳಾದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್, ಗೇಲ್ ಇಂಡಿಯಾ, ಸಣ್ಣ ನೀರಾವರಿ ಇಲಾಖೆ, ನಮ್ಮ ಮೆಟ್ರೋ, ಬಿಎಸ್‌ಎನ್‌ಎಲ್, ರಕ್ಷಣಾ ಇಲಾಖೆ ಮತ್ತು ಇತರೆ ಓಎಫ್‌ಸಿ ಅಳವಡಿಕೆ ಖಾಸಗಿ ಸಂಸ್ಥೆಗಳು ಅನುಸಾಧನ ಅಳವಡಿಸಲು/ದುರಸ್ಥಿಪಡಿಸಲು ರಸ್ತೆ ಕತ್ತರಿಸಿರುವುದರಿಂದ ಕೆಲವೊಂದು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಮುಂದುವರೆದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಕೈಗೊಂಡು ಅನುಷ್ಠಾನಗೊಳಿಸುತ್ತಿರುವುದರಿಂದ ಪ್ರಮುಖವಾಗಿ ಪಾಲಿಕೆಯ ಹೊರವಲಯಗಳಲ್ಲಿನ ಅತೀ ಹೆಚ್ಚಿನ ರಸ್ತೆಗಳನ್ನು ಕೊಳವೆ ಅಳವಡಿಸಲು ಕತ್ತರಿಸುತ್ತಿರುತ್ತಾರೆ. |
| ಆ | ಹಾಗಿದ್ದಲ್ಲಿ, ಈ ರಸ್ತೆಗಳು ಸಂಪೂರ್ಣ ಹಾಳಾಗಲು ಕಾರಣವಾದ ಕಂಪನಿಗಳು / ಏಜೆನ್ಸಿಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು /ದುರಸ್ಥಿಪಡಿಸಲು ರಸ್ತೆ ಕತ್ತರಿಸಿರುವ/ಕತ್ತರಿಸುತ್ತಿರುವ ಸರ್ಕಾರದ ಅಂಗಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಈ ಕೆಳಕಂಡಂತೆ ಇರುತ್ತದೆ.<br><br>**ಸರ್ಕಾರದ ಅಂಗಸಂಸ್ಥೆಗಳು**-ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್, ಗೇಲ್ ಇಂಡಿಯಾ, ಸಣ್ಣ ನೀರಾವರಿ ಇಲಾಖೆ, ನಮ್ಮ ಮೆಟ್ರೋ, ಬಿಎಸ್‌ಎನ್‌ಎಲ್, ರಕ್ಷಣಾ ಇಲಾಖೆ ಮತ್ತು ಇತರೆ ಇಲಾಖೆಗಳು. |

| | | |
|---|---|---|
| | | **ಓಎಫ್‌ಸಿ ಅಳವಡಿಕೆ ಖಾಸಗಿ ಸಂಸ್ಥೆಗಳು:** ಮೆ॥ ಜಿಯೋ ಡಿಜಿಟಲ್ ಫೈಬರ್ ಪ್ರೈವೇಟ್ ಲಿ., ಮೆ॥ ಭಾರತಿ ಏರ್‌ಟೆಲ್ ಲಿ., ಮೆ॥ ವೊಡಾಫೋನ್–ಐಡಿಯ ಟೆಲಿಕಾಂ ಇನ್‌ಫ್ರಾ ಲಿ., ಮೆ॥ ಟಾಟಾ ಕಮ್ಯಿನಿಕೇಷನ್ ಲಿ., ಮೆ॥ ಟಾಟಾ ಟೆಲಿ ಸರ್ವಿಸ್ಸ್ ಲಿ., ಮೆ॥ ಎಟ್ರೇಯಾ ಕನ್ವ್‌ರ್ಜೆನ್ಸ್ ಟೆಕ್ನಾಲಜೀಸ್ ಲಿ. ಮತ್ತು ಮೆ॥ ಟಾಟಾ ಸ್ಕೈ ಬ್ರಾಡ್ ಬ್ಯಾಂಡ್ ಪ್ರೈ ಲಿ. |
| ಇ | ಈ ರಸ್ತೆಗಳನ್ನು ಅಗೆದು ದುರಸ್ತಿ ಪಡಿಸದೆ ಹಾಗೆ ಉಳಿಸಿರುವ ಕಂಪನಿ ಹಾಗೂ ಏಜೆನ್ಸಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು / ದುರಸ್ಥಿಪಡಿಸಲು ಅನಧಿಕೃತವಾಗಿ ರಸ್ತೆ ಕತ್ತರಿಸಿರುವ / ಕತ್ತರಿಸುತ್ತಿರುವ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 210 ಎಂಎನ್‌ವೈ 2017, ದಿನಾಂಕ: 10.12.2018 ರನ್ವಯ ಪಾಲಿಕೆ ವತಿಯಿಂದ ದಂಡ ವಿಧಿಸುವ ಮತ್ತು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ.<br><br>ಮುಂದುವರೆದು, ಗೇಲ್‌ಗ್ಯಾಸ್/ಗೇಲ್ ಇಂಡಿಯಾ ಮತ್ತು ಸಣ್ಣ ನೀರಾವರಿ ಇಲಾಖೆಗಳು ಪಾಲಿಕೆ ವ್ಯಾಪ್ತಿಯ ರಸ್ತೆಗಳನ್ನು ಅಗೆದು ದುರಸ್ತಿಪಡಿಸದೇ ಹಾಗೆ ಉಳಿಸಿರುವ ಪ್ರಕರಣಗಳನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯ ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಿ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಲಾಗಿರುತ್ತದಲ್ಲದೆ, ಸದರಿ ಸಂಸ್ಥೆಗಳೇ ರಸ್ತೆ ದುರಸ್ಥಿ/ಮನಃಶ್ಚೇತನ ಕೈಗೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ. |
| ಈ | ನಗರದ ಎಲ್ಲಾ ರಸ್ತೆಗಳನ್ನು ಅಗೆದು ಭೂಮಿಯೊಳಗೆ ಕೇಬಲ್‌ಗಳನ್ನು ಅಳವಡಿಸುತ್ತಿರುವುದರಿಂದ ರಸ್ತೆಗಳು ಗುಂಡಿಗಳಾಗಿ ಪರಿವರ್ತನೆಯಾಗಿ ಸಾರ್ವಜನಿಕರ ಹಾಗೂ ವಾಹನ ಸವಾರರಿಗೆ ತೊಂದರೆಯಾಗಿ ಅಪಘಾತ–ಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಸರ್ಕಾರದ ಅಂಗಸಂಸ್ಥೆಗಳಾದ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್, ಗೇಲ್ ಇಂಡಿಯಾ, ಸಣ್ಣ ನೀರಾವರಿ ಇಲಾಖೆ, ನಮ್ಮ ಮೆಟ್ರೋ, ಬಿಎಸ್‌ಎನ್‌ಎಲ್, ರಕ್ಷಣಾ ಇಲಾಖೆ ಮತ್ತು ಇತರೆ ಓಎಫ್‌ಸಿ ಅಳವಡಿಕೆ ಖಾಸಗಿ ಸಂಸ್ಥೆಗಳು ಅನುಸಾಧನ ಅಳವಡಿಸಲು/ದುರಸ್ಥಿಪಡಿಸಲು ರಸ್ತೆಗಳನ್ನು ಅಗೆದಿರುವುದರಿಂದ/ಅಗೆಯುತ್ತಿರುವುದರಿಂದ ಹಲವಾರು ರಸ್ತೆಗಳಲ್ಲಿ ರಸ್ತೆಗುಂಡಿಗಳಾಗಿ ಸಾರ್ವಜನಿಕರ ಹಾಗೂ ವಾಹನ ಸವಾರರಿಗೆ ಕೆಲವೊಂದು ಸಂದರ್ಭಗಳಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

. . .3.

| | | |
|---|---|---|
| ಉ | ಹಾಗಿದ್ದಲ್ಲಿ, ಸದರಿ ಕಂಪನಿಗಳು/ ಏಜೆನ್ಸಿಗಳು ಸಂಬಂಧಪಟ್ಟ ಇಲಾಖೆಗಳಿಂದ ಪರವಾನಗಿ ಅಥವಾ ಅನುಮತಿ ಪತ್ರಗಳನ್ನು ಪಡೆದಿವೆಯೇ; (ಹಾಗಿದ್ದಲ್ಲಿ, ಅವುಗಳ ಪ್ರತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಸರ್ಕಾರದ ಅಂಗಸಂಸ್ಥೆಗಳಾದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್, ಗೇಲ್ ಇಂಡಿಯಾ, ಸಣ್ಣ ನೀರಾವರಿ ಇಲಾಖೆ, ನಮ್ಮ ಮೆಟ್ರೋ, ಬಿಎಸ್‌ಎನ್‌ಎಲ್, ರಕ್ಷಣಾ ಇಲಾಖೆ ಮತ್ತು ಇತರೆ ಇಲಾಖೆಗಳು ಅನುಸಾಧನ ಅಳವಡಿಸಲು/ದುರಸ್ಥಿಪಡಿಸಲು ಆನ್‌ಲೈನ್ ವೇದಿಕೆ Multi Agency Road Cutting Co-Ordination System (MARCCS) ಅಡಿಯಲ್ಲಿ ದಿನಾಂಕ:01.04.2021 ರಿಂದ ದಿನಾಂಕ:08.12.2021 ರವರೆಗೆ ಅನುಮತಿ ಪಡೆದಿರುವ ಮಾಹಿತಿಗಳನ್ನು ವಿದ್ಯುನ್ಮಾನ ರೂಪದಲ್ಲಿ (Compact Disc) **ಅನುಬಂಧ-1ರಲ್ಲಿ ನೀಡಿದೆ.**<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಓಎಫ್‌ಸಿ ಕೇಬಲ್ ಅಳವಡಿಸಲು ಖಾಸಗಿ ಸಂಸ್ಥೆಗಳು ದಿನಾಂಕ:01.04.2021 ರಿಂದ ದಿನಾಂಕ:08.12.2021 ರವರೆಗೆ ಅನುಮತಿ ಪಡೆದಿರುವ ಮಾಹಿತಿಗಳನ್ನು ವಿದ್ಯುನ್ಮಾನ ರೂಪದಲ್ಲಿ(Compact Disc) **ಅನುಬಂಧ-2ರಲ್ಲಿ ನೀಡಿದೆ.** |
| ಊ | ಅನುಮತಿ ಪಡೆಯದೆ ರಸ್ತೆಗಳನ್ನು ಅಗೆದಿರುವ ಕಂಪನಿಗಳು/ಏಜೆನ್ಸಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು/ದುರಸ್ಥಿಪಡಿಸಲು ಅನಧಿಕೃತವಾಗಿ ಅನುಮತಿ ಪಡೆಯದೆ ರಸ್ತೆ ಕತ್ತರಿಸಿರುವ/ಕತ್ತರಿಸುತ್ತಿರುವ ಪ್ರಕರಣಗಳಲ್ಲಿ ಸರ್ಕಾರದ ಆದೇಶದಂತೆ ಪಾಲಿಕೆ ವತಿಯಿಂದ ದಂಡ ವಿಧಿಸುವುದು ಮತ್ತು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ.<br><br>ಮುಂದುವರೆದು, ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯ ಸಮನ್ವಯ ಸಮಿತಿ ಸಭೆಯಲ್ಲಿಯೂ ಚರ್ಚಿಸಿ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಲಾಗಿರುತ್ತದಲ್ಲದೆ, ಸದರಿ ಸಂಸ್ಥೆಗಳೇ ರಸ್ತೆ ದುರಸ್ಥಿ/ಪುನಃಶ್ಚೇತನ ಕೈಗೊಳ್ಳುವಂತೆ ಅಥವಾ ರಸ್ತೆ ಪುನಃಶ್ಚೇತನ/ದುರಸ್ಥಿ ವೆಚ್ಚವನ್ನು ಪಾಲಿಕೆಗೆ ಪಾವತಿಸಲು ಸೂಚನೆ ನೀಡಲಾಗಿರುತ್ತದೆ. |

| | | |
|---|---|---|
| ಇ) | ಈ ರೀತಿ ಬೇಕಾಬಿಟ್ಟಿಯಾಗಿ ರಸ್ತೆಗಳನ್ನು BBMP, BESCOM, BWSSB ಹಾಗೂ ಹಲವು ಖಾಸಗಿ ಸಂಸ್ಥೆಗಳು ರಸ್ತೆಗಳನ್ನು ಅಗೆಯುತ್ತಿರುವುದು ನಿಜವೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು /ದುರಸ್ಥಿಪಡಿಸಲು ಬೆಸ್ಕಾಂ, ಬಿಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಹಲವು ಖಾಸಗಿ ಸಂಸ್ಥೆಗಳು ರಸ್ತೆಗಳನ್ನು ಕತ್ತರಿಸುತ್ತಿರುವುದು ಕಂಡುಬಂದಿರುತ್ತದೆ.<br>ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಪ್ರಮುಖವಾಗಿ ಪಾಲಿಕೆಯ ಹೊರವಲಯಗಳಲ್ಲಿನ ಅತೀ ಹೆಚ್ಚಿನ ರಸ್ತೆಗಳನ್ನು ಕೊಳವೆ ಅಳವಡಿಸಲು ಕತ್ತರಿಸುತ್ತಿರುತ್ತಾರೆ. |
| ಈ) | ಹಾಗಿದ್ದಲ್ಲಿ, ಈ ರೀತಿ ಬೇಕಾಬಿಟ್ಟಿ ಅಗೆದಿರುವ ಕಂಪನಿಗಳು ವತಿಯಿಂದ ಸದರಿ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು/ದುರಸ್ಥಿಪಡಿಸಲು ಅನಧಿಕೃತವಾಗಿ ಅನುಮತಿ ಪಡೆಯದೆ ರಸ್ತೆ ಕತ್ತರಿಸಿರುವ/ಕತ್ತರಿಸುತ್ತಿರುವ ಪ್ರಕರಣಗಳಲ್ಲಿ ಸರ್ಕಾರದ ಆದೇಶದಂತೆ ಪಾಲಿಕೆ ವತಿಯಿಂದ ದಂಡ ವಿಧಿಸುವುದು ಮತ್ತು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ.<br>ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು /ದುರಸ್ಥಿಪಡಿಸಲು ಅನುಮತಿ ನೀಡುವ ಪ್ರಕರಣಗಳಲ್ಲಿ ರಸ್ತೆ ಪುನಃಶ್ಚೇತನ ವೆಚ್ಚವನ್ನು ಸಹ ಸದರಿ ಸಂಸ್ಥೆಗಳಿಂದ ಭರಿಸಿಕೊಂಡು ಅನುಮತಿ ನೀಡಲಾಗುತ್ತಿದ್ದು, ಸದರಿ ವೆಚ್ಚದಲ್ಲಿ ರಸ್ತೆ ಕತ್ತರಿಸಿದ ಭಾಗಗಳ ದುರಸ್ಥಿ/ ಪುನಃಶ್ಚೇತನವನ್ನು ಪಾಲಿಕೆಯಿಂದ ನಿಯೋಜಿಸಿಕೊಂಡಿರುವ ಗುತ್ತಿಗೆದಾರರ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗಿದೆ.<br>ಮುಂದುವರೆದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 110 ಹಳ್ಳಿಗಳ ಯೋಜನೆಯಡಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಅಳವಡಿಸಲು ರಸ್ತೆ ಕತ್ತರಿಸಿರುವ ಭಾಗಗಳ ಪುನಃಶ್ಚೇತನ/ಅಭಿವೃದ್ಧಿಗೆ 2020-21ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 06 ಎಂಎನ್‌ವೈ 2021, ದಿನಾಂಕ:29.04.2021 ರಲ್ಲಿ ರೂ.1000 ಕೋಟಿ ಅನುದಾನದ ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿದ್ದು, ಪ್ರಸ್ತುತ ಸದರಿ ಕಾಮಗಾರಿಗಳ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆಯು ವಿವಿಧ ಹಂತದಲ್ಲಿರುತ್ತದೆ. |

**ನಅಇ 358 ಎಂಎನ್‌ವೈ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ